# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಜನವರಿ'2015ರ ಮಾಹೆಯಿಂದ ಮಾರ್ಚ್'2015ರ ಮಾಹೆಯ ಅವಧಿಗೆ ಗೌರವಧನ ಪಾವತಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014, ದಿನಾಂಕ: 06.12.2014
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014, ದಿನಾಂಕ: 29.01.2014
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 129 ಗ್ರಾಪಂಕ 2002(3), ದಿನಾಂಕ: 02.12.2003.

ಪ್ರಸ್ತಾವನೆ:

ರಾಜ್ಯದ ಮೂರು ಹಂತದ ಪಂಚಾಯತ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಗೌರವಧನವನ್ನು ದ್ವಿಗುಣಗೊಳಿಸಲು 2014-15ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ, ಚುನಾಯಿತ ಪ್ರತಿನಿಧಿಗಳ ಗೌರವಧನವನ್ನು ದ್ವಿಗುಣಗೊಳಿಸಿ ಆದೇಶಿಸಿ ಓದಲಾದ (1) ಮತ್ತು (2)ರ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದೆ. ಅದರಂತೆ, ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಮಾಸಿಕ ರೂ. 6000/-, ಉಪಾಧ್ಯಕ್ಷರಿಗೆ ಮಾಸಿಕ ರೂ. 4500/- ಮತ್ತು ಸದಸ್ಯರಿಗೆ ಮಾಸಿಕ ರೂ. 3000/- ಗೌರವಧನವನ್ನು ಪಾವತಿಸಲಾಗುತ್ತದೆ. ಅಂತೆಯೇ, ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಮಾಸಿಕ ರೂ. 4500/-, ಉಪಾಧ್ಯಕ್ಷರಿಗೆ ಮಾಸಿಕ ರೂ. 3000/- ಮತ್ತು ಸದಸ್ಯರಿಗೆ ಮಾಸಿಕ ರೂ. 1500/- ಗೌರವಧನವನ್ನು ಪಾವತಿಸಲಾಗುತ್ತದೆ. ಜಿಲ್ಲಾ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನ ಪಾವತಿಸಲು ಲೆಕ್ಕ ಶೀರ್ಷಿಕೆ 2515-00-101-0-28 (2515-00-196-1-05) (ಯೋಜನೇತರ)ರಡಿ 2015-16ನೇ ಸಾಲಿಗೆ ರೂ. 95.22 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ತಾಲ್ಲೂಕು ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನ ಪಾವತಿಸಲು ಲೆಕ್ಕ ಶೀರ್ಷಿಕೆ 2515-00-102-0-61 (2515-00-197-1-10) (ಯೋಜನೇತರ)ರಡಿ 2015-16ನೇ ಸಾಲಿಗೆ ರೂ. 188.42 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನಗಳನ್ನು ಶಾಸನಬದ್ಧ ಅನುದಾನಗಳನ್ನು ಬಿಡುಗಡೆಗೊಳಿಸುವ ಮಾದರಿಯಲ್ಲಿಯೇ ಬಿಡುಗಡೆಗೊಳಿಸಲು ಉದ್ದೇಶಿಸಲಾಗಿದೆ.

ಲೆಕ್ಕ ಶೀರ್ಷಿಕೆ 2515-00-101-0-28 (2515-00-196-1-05) (ಯೋಜನೇತರ)ರಡಿ ಮತ್ತು 2515-00-102-0-61 (2515-00-197-1-10) (ಯೋಜನೇತರ)ರಡಿ ಹಂಚಿಕೆಯಾದ ಅನುದಾನಗಳನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಸೆಳೆದು ರಾಷ್ಟ್ರೀಕೃತ ಬ್ಯಾಂಕ್‌ಗಳ ಮುಖಾಂತರ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾ.ಅ ಮತ್ತು ಪಂ. ರಾಜ್ ಇಲಾಖೆ ಇವರಿಗೆ ಈ ಆದೇಶದ ಮೂಲಕ ಅಧಿಕಾರವನ್ನು ಪ್ರದತ್ತಗೊಳಿಸಿ ಆದೇಶಿಸಲಾಗಿದೆ.

ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಮತ್ತು ಸದಸ್ಯರುಗಳಿಗೆ ಜನವರಿ'2015ರ ಮಾಹೆಯಿಂದ ಮಾರ್ಚ್'2015 ರ ಮಾಹೆಯ ಅವಧಿಗೆ ಗೌರವಧನವನ್ನು ಪಾವತಿಸಲು ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014(ಭಾಗ-2), ಬೆಂಗಳೂರು, ದಿನಾಂಕ: 28.04.2015

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಮತ್ತು ಸದಸ್ಯರುಗಳಿಗೆ ಜನವರಿ'2015ರ ಮಾಹೆಯಿಂದ ಮಾರ್ಚ್'2015ರ ಮೂರು ತಿಂಗಳ ಅವಧಿಗೆ ಒಟ್ಟು **ರೂ.2,83,50,000-00 (ರೂಪಾಯಿ ಎರಡು ಕೋಟಿ ಎಂಬತ್ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳ ಗೌರವಧನವನ್ನು ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಜಿಲ್ಲಾ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಗೌರವ ಧನ ಪಾವತಿಗಾಗಿ ರೂ.95,22,000-00 (ರೂಪಾಯಿ ತೊಂಭತ್ತೈದು ಲಕ್ಷದ ಇಪ್ಪತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ 2515-00-101-0-28 (2515-00-196-1-05) (ಯೋಜನೇತರ)ರಡಿ ವೆಚ್ಚ ಭರಿಸಲು ಮತ್ತು ತಾಲ್ಲೂಕು ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಗೌರವ ಧನ ಪಾವತಿಗಾಗಿ ರೂ.1,88,28,000-00 (ರೂಪಾಯಿ ಒಂದು ಕೋಟಿ ಎಂಬತ್ತೆಂಟು ಲಕ್ಷದ ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ 2515-00-102-0-61 (2515-00-197-1-10) (ಯೋಜನೇತರ)ರಡಿ ವೆಚ್ಚ ಭರಿಸಲು ಅನುಮೋದನೆ ನೀಡಲಾಗಿದೆ.

ಒಟ್ಟು ರೂ.2,83,50,000-00 (ರೂಪಾಯಿ ಎರಡು ಕೋಟಿ ಎಂಬತ್ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಸೆಳೆದು ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲೂ.ಎಸ್.ಎಸ್.ಬಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿ ಶಾಸನಬದ್ಧ ಅನುದಾನ ವ್ಯವಹಾರಗಳಿಗಾಗಿ ತೆರೆದಿರುವ ಸಂಖ್ಯೆ : **04462010088409** - ಉಳಿತಾಯ ಖಾತೆ - ಮೂಲಕ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ - 1 ಮತ್ತು 2ರಲ್ಲಿ ಪಟ್ಟಿ ಮಾಡಿರುವಂತೆ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆಗೊಳಿಸಲು ಆದೇಶಿಸಲಾಗಿದೆ.

ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನವನ್ನು ಅದೇ ಉದ್ದೇಶಕ್ಕಲ್ಲದೇ ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 124 ವೆಚ್ಚ 6/2014, ದಿನಾಂಕ: 20.04.2015 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

6. ಆರ್ಥಿಕ ಇಲಾಖೆ (ವೆಚ್ಚ–6), ವಿಧಾನ ಸೌಧ.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ಕರ್ನಾಟಕ ವಿಕಾಸ/ವೆಬ್‌ಸೈಟ್.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ/ಸಹಾಯಕರು.

ಅನುಬಂಧ – 1

# ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಜನವರಿ'2015ರ ಮಾಹೆಯಿಂದ ಮಾರ್ಚ್'2015ರ ಮಾಹೆಯವರೆಗೆ ನೀಡಬೇಕಾಗಿರುವ ಗೌರವ ಧನದ ವಿವರಗಳು

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014(ಭಾಗ-2), ಬೆಂಗಳೂರು, ದಿನಾಂಕ: 28.04.2015

| ಕ್ರ ಸಂ. | ಜಿಲ್ಲೆಯ ಹೆಸರು | ಒಟ್ಟು ತಾಲ್ಲೂಕು ಪಂಚಾಯತಿಗಳ ಸಂಖ್ಯೆ | ತಾಲ್ಲೂಕು ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರುಗಳ ಸಂಖ್ಯೆ | ತಾಲ್ಲೂಕು ಪಂಚಾಯತಿ ಸದಸ್ಯರುಗಳ ಸಂಖ್ಯೆ | ಮೂರು ತಿಂಗಳಿಗೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ * ಗೌರವಧನ | ಮೂರು ತಿಂಗಳಿಗೆ ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರುಗಳಿಗೆ ನೀಡಬೇಕಾಗಿರುವ ** ಗೌರವಧನ | ಮೂರು ತಿಂಗಳಿಗೆ ತಾಲ್ಲೂಕು ಪಂಚಾಯತಿ ಸದಸ್ಯರುಗಳಿಗೆ ನೀಡಬೇಕಾಗಿರುವ *** ಗೌರವಧನ | ಮೂರು ತಿಂಗಳಿಗೆ ನೀಡಬೇಕಾಗಿರುವ ಒಟ್ಟು ಗೌರವಧನ |
|---|---|---|---|---|---|---|---|---|---|
| 1 | ಬೆಂಗಳೂರು ನಗರ | 3 | 3 | 3 | 66 | 40500.00 | 27000.00 | 297000.00 | 364500.00 |
| 2 | ಬೆಂಗಳೂರು ಗ್ರಾಮಾಂತರ | 4 | 4 | 4 | 60 | 54000.00 | 36000.00 | 270000.00 | 360000.00 |
| 3 | ರಾಮನಗರ | 4 | 4 | 4 | 75 | 54000.00 | 36000.00 | 337500.00 | 427500.00 |
| 4 | ಕೋಲಾರ | 6 | 6 | 6 | 117 | 81000.00 | 54000.00 | 526500.00 | 661500.00 |
| 5 | ಚಿಕ್ಕಬಳ್ಳಾಪುರ | 6 | 6 | 6 | 117 | 81000.00 | 54000.00 | 526500.00 | 661500.00 |
| 6 | ತುಮಕೂರು | 5 | 5 | 5 | 92 | 67500.00 | 45000.00 | 414000.00 | 526500.00 |
| 7 | ಚಿತ್ರದುರ್ಗ | 6 | 6 | 6 | 90 | 81000.00 | 54000.00 | 405000.00 | 540000.00 |
| 8 | ದಾವಣಗೆರೆ | 7 | 7 | 7 | 95 | 94500.00 | 63000.00 | 427500.00 | 585000.00 |
| 9 | ಶಿವಮೊಗ್ಗ | 10 | 10 | 10 | 192 | 135000.00 | 90000.00 | 864000.00 | 1089000.00 |
| 10 | ಮೈಸೂರು | 7 | 7 | 7 | 96 | 94500.00 | 63000.00 | 432000.00 | 589500.00 |
| 11 | ಚಾಮರಾಜನಗರ | 5 | 5 | 5 | 119 | 67500.00 | 45000.00 | 535500.00 | 648000.00 |
| 12 | ಹಾಸನ | 3 | 3 | 3 | 89 | 40500.00 | 27000.00 | 400500.00 | 468000.00 |
| 13 | ಕೊಡಗು | 8 | 8 | 8 | 134 | 108000.00 | 72000.00 | 603000.00 | 783000.00 |
| 14 | ಮಂಡ್ಯ | 3 | 3 | 3 | 43 | 40500.00 | 27000.00 | 193500.00 | 261000.00 |
| 15 | ಚಿಕ್ಕಮಗಳೂರು | 7 | 7 | 7 | 138 | 94500.00 | 63000.00 | 621000.00 | 778500.00 |
| 16 | ಉಡುಪಿ | 7 | 7 | 7 | 157 | 94500.00 | 63000.00 | 706500.00 | 864000.00 |
| 17 | ದಕ್ಷಿಣ ಕನ್ನಡ | 4 | 4 | 4 | 77 | 54000.00 | 36000.00 | 346500.00 | 436500.00 |
| 18 | ಬೆಳಗಾವಿ | 10 | 10 | 10 | 316 | 135000.00 | 90000.00 | 1422000.00 | 1647000.00 |
| 19 | ವಿಜಯಪುರ | 5 | 5 | 5 | 134 | 67500.00 | 45000.00 | 603000.00 | 715500.00 |
| 20 | ಬಾಗಲಕೋಟೆ | 6 | 6 | 6 | 106 | 81000.00 | 54000.00 | 477000.00 | 612000.00 |
| 21 | ಧಾರವಾಡ | 5 | 5 | 5 | 65 | 67500.00 | 45000.00 | 292500.00 | 405000.00 |

| | | | | | | | | | |
|---|---|---|---|---|---|---|---|---|---|
| 22 | ಗದಗ | 5 | 5 | 5 | 61 | 67500.00 | 45000.00 | 274500.00 | 387000.00 |
| 23 | ಹಾವೇರಿ | 7 | 7 | 7 | 104 | 94500.00 | 63000.00 | 468000.00 | 625500.00 |
| 24 | ಉತ್ತರ ಕನ್ನಡ | 11 | 11 | 11 | 106 | 148500.00 | 99000.00 | 477000.00 | 724500.00 |
| 25 | ಬೀದರ್ | 5 | 5 | 5 | 108 | 67500.00 | 45000.00 | 486000.00 | 598500.00 |
| 26 | ಬಳ್ಳಾರಿ | 7 | 7 | 7 | 121 | 94500.00 | 63000.00 | 544500.00 | 702000.00 |
| 27 | ರಾಯಚೂರು | 5 | 5 | 5 | 120 | 67500.00 | 45000.00 | 540000.00 | 652500.00 |
| 28 | ಕಲಬುರ್ಗಿ | 7 | 7 | 7 | 141 | 94500.00 | 63000.00 | 634500.00 | 792000.00 |
| 29 | ಯಾದಗಿರಿ | 3 | 3 | 3 | 75 | 40500.00 | 27000.00 | 337500.00 | 405000.00 |
| 30 | ಕೊಪ್ಪಳ | 4 | 4 | 4 | 95 | 54000.00 | 36000.00 | 427500.00 | 517500.00 |
| | **ಒಟ್ಟು** | **175** | **175** | **175** | **3309** | **2362500.00** | **1575000.00** | **14890500.00** | **18828000.00** |

ಒಟ್ಟು ರೂಪಾಯಿ ಒಂದು ಕೋಟಿ ಎಂಬತ್ತೆಂಟು ಲಕ್ಷದ ಇಪ್ಪತ್ತೆಂಟು ಸಾವಿರ ಮಾತ್ರ

* ತಾ.ಪಂ. ಅಧ್ಯಕ್ಷರಿಗೆ ಮಾಸಿಕ ಗೌರವಧನ ರೂ. 4500.00; ** ತಾ.ಪಂ. ಉಪಾಧ್ಯಕ್ಷರಿಗೆ ಮಾಸಿಕ ಗೌರವಧನ ರೂ. 3000.00; *** ತಾ.ಪಂ. ಸದಸ್ಯರಿಗೆ ಮಾಸಿಕ ಗೌರವಧನ ರೂ. 1500.00

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅನುಬಂಧ – 2

# ರಾಜ್ಯದ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಜನವರಿ'2015ರ ಮಾಹೆಯಿಂದ ಮಾರ್ಚ್'2015ರ ಮಾಹೆಯವರೆಗೆ ನೀಡಬೇಕಾಗಿರುವ ಗೌರವ ಧನದ ವಿವರಗಳು

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014(ಭಾಗ–2), ಬೆಂಗಳೂರು, ದಿನಾಂಕ: 28.04.2015

| ಕ್ರ. ಸಂ. | ಜಿಲ್ಲೆ / ಜಿಲ್ಲಾ ಪಂಚಾಯತಿ ಹೆಸರು | ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರುಗಳ ಸಂಖ್ಯೆ | ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆ | ಮೂರು ತಿಂಗಳಿಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ * ಗೌರವಧನ | ಮೂರು ತಿಂಗಳಿಗೆ ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರುಗಳಿಗೆ ನೀಡಬೇಕಾಗಿರುವ ** ಗೌರವಧನ | ಮೂರು ತಿಂಗಳಿಗೆ ಜಿಲ್ಲಾ ಪಂಚಾಯತಿ ಸದಸ್ಯರುಗಳಿಗೆ ನೀಡಬೇಕಾಗಿರುವ *** ಗೌರವಧನ | ಮೂರು ತಿಂಗಳಿಗೆ ನೀಡಬೇಕಾಗಿರುವ ಒಟ್ಟು ಗೌರವಧನ |
|---|---|---|---|---|---|---|---|---|
| 1 | ಬೆಂಗಳೂರು ನಗರ | 1 | 1 | 32 | 18000.00 | 13500.00 | 288000.00 | 319500.00 |
| 2 | ಬೆಂಗಳೂರು ಗ್ರಾಮಾಂತರ | 1 | 1 | 16 | 18000.00 | 13500.00 | 144000.00 | 175500.00 |
| 3 | ರಾಮನಗರ | 1 | 1 | 20 | 18000.00 | 13500.00 | 180000.00 | 211500.00 |
| 4 | ಕೋಲಾರ | 1 | 1 | 32 | 18000.00 | 13500.00 | 288000.00 | 319500.00 |
| 5 | ಚಿಕ್ಕಬಳ್ಳಾಪುರ | 1 | 1 | 32 | 18000.00 | 13500.00 | 288000.00 | 319500.00 |
| 6 | ತುಮಕೂರು | 1 | 1 | 26 | 18000.00 | 13500.00 | 234000.00 | 265500.00 |
| 7 | ಚಿತ್ರದುರ್ಗ | 1 | 1 | 25 | 18000.00 | 13500.00 | 225000.00 | 256500.00 |
| 8 | ದಾವಣಗೆರೆ | 1 | 1 | 29 | 18000.00 | 13500.00 | 261000.00 | 292500.00 |
| 9 | ಶಿವಮೊಗ್ಗ | 1 | 1 | 55 | 18000.00 | 13500.00 | 495000.00 | 526500.00 |
| 10 | ಮೈಸೂರು | 1 | 1 | 32 | 18000.00 | 13500.00 | 288000.00 | 319500.00 |
| 11 | ಚಾಮರಾಜನಗರ | 1 | 1 | 33 | 18000.00 | 13500.00 | 297000.00 | 328500.00 |
| 12 | ಹಾಸನ | 1 | 1 | 23 | 18000.00 | 13500.00 | 207000.00 | 238500.00 |
| 13 | ಕೊಡಗು | 1 | 1 | 38 | 18000.00 | 13500.00 | 342000.00 | 373500.00 |
| 14 | ಮಂಡ್ಯ | 1 | 1 | 27 | 18000.00 | 13500.00 | 243000.00 | 274500.00 |
| 15 | ಚಿಕ್ಕಮಗಳೂರು | 1 | 1 | 38 | 18000.00 | 13500.00 | 342000.00 | 373500.00 |
| 16 | ಉಡುಪಿ | 1 | 1 | 44 | 18000.00 | 13500.00 | 396000.00 | 427500.00 |
| 17 | ದಕ್ಷಿಣ ಕನ್ನಡ | 1 | 1 | 19 | 18000.00 | 13500.00 | 171000.00 | 202500.00 |
| 18 | ಬೆಳಗಾವಿ | 1 | 1 | 84 | 18000.00 | 13500.00 | 756000.00 | 787500.00 |
| 19 | ವಿಜಯಪುರ | 1 | 1 | 36 | 18000.00 | 13500.00 | 324000.00 | 355500.00 |

| | | | | | | | | |
|---|---|---|---|---|---|---|---|---|
| 20 | ಬಾಗಲಕೋಟೆ | 1 | 1 | 30 | 18000.00 | 13500.00 | 270000.00 | 301[illegible].00 |
| 21 | ಧಾರವಾಡ | 1 | 1 | 20 | 18000.00 | 13500.00 | 180000.00 | 211500.00 |
| 22 | ಗದಗ | 1 | 1 | 16 | 18000.00 | 13500.00 | 144000.00 | 175500.00 |
| 23 | ಹಾವೇರಿ | 1 | 1 | 30 | 18000.00 | 13500.00 | 270000.00 | 301500.00 |
| 24 | ಉತ್ತರ ಕನ್ನಡ | 1 | 1 | 34 | 18000.00 | 13500.00 | 306000.00 | 337500.00 |
| 25 | ಬೀದರ್ | 1 | 1 | 29 | 18000.00 | 13500.00 | 261000.00 | 292500.00 |
| 26 | ಬಳ್ಳಾರಿ | 1 | 1 | 34 | 18000.00 | 13500.00 | 306000.00 | 337500.00 |
| 27 | ರಾಯಚೂರು | 1 | 1 | 33 | 18000.00 | 13500.00 | 297000.00 | 328500.00 |
| 28 | ಕಲಬುರ್ಗಿ | 1 | 1 | 41 | 18000.00 | 13500.00 | 369000.00 | 400500.00 |
| 29 | ಯಾದಗಿರಿ | 1 | 1 | 20 | 18000.00 | 13500.00 | 180000.00 | 211500.00 |
| 30 | ಕೊಪ್ಪಳ | 1 | 1 | 25 | 18000.00 | 13500.00 | 225000.00 | 256500.00 |
| ಒಟ್ಟು | | **30** | **30** | **953** | **540000.00** | **405000.00** | **8577000.00** | **9522000.00** |

ಒಟ್ಟು ರೂಪಾಯಿ ತೊಂಬತ್ತೈದು ಲಕ್ಷದ ಇಪ್ಪತ್ತೆರಡು ಸಾವಿರ ಮಾತ್ರ

* ಜಿ.ಪಂ. ಅಧ್ಯಕ್ಷರಿಗೆ ಮಾಸಿಕ ಗೌರವಧನ ರೂ. 6000.00; ** ಜಿ.ಪಂ. ಉಪಾಧ್ಯಕ್ಷರಿಗೆ ಮಾಸಿಕ ಗೌರವಧನ ರೂ. 4500.00; *** ಜಿ.ಪಂ. ಸದಸ್ಯರಿಗೆ ಮಾಸಿಕ ಗೌರವಧನ ರೂ. 3000.00

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ